ಕರ್ನಾಟಕ ಸರ್ಕಾರ

ಸಂಖ್ಯೆ:ಕಾಇ 316 ಎಲ್‌ಇಟಿ 2010(1)

ಕರ್ನಾಟಕ ಸರ್ಕಾರ ಸಚಿವಾಲಯ
ವಿಕಾಸ ಸೌಧ
ಬೆಂಗಳೂರು, ದಿನಾಂಕ: 30.11.2010

## ಅಧಿಸೂಚನೆ

ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986 (ಕೇಂದ್ರ ಕಾಯ್ದೆ 61-1986) ಕಲಂ 17ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನು ಹೊರತುಪಡಿಸಿ, ಸರ್ಕಾರದ ಇತರೆ ಇಲಾಖೆಗಳ ಅಧಿಕಾರಿಗಳನ್ನು "ನಿರೀಕ್ಷಕರನ್ನಾಗಿ" ನೇಮಕ ಮಾಡಿ, ಸರ್ಕಾರ ಅಧಿಸೂಚನೆ ಸಂಖ್ಯೆ:ಕಾಇ 61 ಸಿಎಲ್ ಸಿ 2001, ದಿನಾಂಕ:22.09.2001ರಂದು ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ದಿನಾಂಕ:22.09.2001ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಭಾಗಶ: ಮಾರ್ಪಾಡು ಮಾಡಿ ಈ ಕೆಳಗಿನ ಕೋಷ್ಟಕದ 2ನೇ ಅಂಕಣದಲ್ಲಿ ನಮೂದಿಸಿರುವ ರಾಜ್ಯದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು "ನಿರೀಕ್ಷಕರನ್ನಾಗಿ" ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ. ಕೋಷ್ಟಕದ 2ನೇ ಅಂಕಣದಲ್ಲಿ ನಮೂದಿಸಿರುವ ಅಧಿಕಾರಿಗಳು ಆಯಾ ಇಲಾಖೆಗಳು ನಿರ್ದಿಷ್ಟಪಡಿಸಿರುವ ಕಾರ್ಯವ್ಯಾಪ್ತಿ ಒಳಗೆ ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ನ್ನು (ಕೇಂದ್ರ ಕಾಯ್ದೆ 61-1986ನ್ನು) ಅವರವರ ಕಾರ್ಯವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸುವ ಅಧಿಕಾರವನ್ನು ಹೊಂದಿರುತ್ತಾರೆ.

### ಕೋಷ್ಟಕ

| ಕ್ರ.ಸಂ | ಇಲಾಖೆ ಮತ್ತು ಅಧಿಕಾರಿಗಳ ಪದನಾಮ |
|---|---|
| 1 | ಕಂದಾಯ ಇಲಾಖೆ:-<br>1. ತಹಶೀಲ್ದಾರ್ ಗಳು<br>2. ನಾಡ ಕಛೇರಿಗಳ ಉಪ ತಹಶೀಲ್ದಾರ್ ಗಳು<br>3. ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು |
| 2 | ಪಂಚಾಯತ್ ರಾಜ್ ಇಲಾಖೆ:-<br>1. ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕ್ ಪಂಚಾಯತ್<br>2. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು |
| 3 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:-<br>1. ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು<br>2. ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು |
| 4 | ಶಿಕ್ಷಣ ಇಲಾಖೆ:-<br>1. ಕ್ಷೇತ್ರ ಶಿಕ್ಷಣಾಧಿಕಾರಿಗಳು<br>2. ಬ್ಲಾಕ್ ರಿಸೋರ್ಸ್ ಕೋ- ಆರ್ಡಿನೇಟರ್<br>3. ಸರ್ವ ಶಿಕ್ಷಣ ಅಭಿಯಾನ ಅಧಿಕಾರಿಗಳು |

| | |
|---|---|
| 5 | ಕಾರ್ಖಾನೆ ಮತ್ತು ಬಾಯ್ಲರ್‌ಗಳ ಇಲಾಖೆ:-<br>1. ಉಪ ನಿರ್ದೇಶಕರು<br>2. ಹಿರಿಯ ಸಹಾಯಕ ನಿರ್ದೇಶಕರುಗಳು<br>3. ಸಹಾಯಕ ನಿರ್ದೇಶಕರುಗಳು |
| 6 | ನಗರಾಭಿವೃದ್ಧಿ ಇಲಾಖೆ:-<br>1. ನಗರ ಸಭೆ ಆಯುಕ್ತರು<br>2. ಮುಖ್ಯಾಧಿಕಾರಿಗಳು<br>3. ಹೆಲ್ತ್ ಇನ್ಸ್‌ಪೆಕ್ಟರ್‌ಗಳು<br>4. ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು |
| 7 | ರೇಷ್ಮೆ ಇಲಾಖೆ:-<br>1. ರೇಷ್ಮೆ ಕೃಷಿ ವಿಸ್ತರಣಾಧಿಕಾರಿಗಳು<br>2. ರೇಷ್ಮೆ ಕೃಷಿ ಸಹಾಯಕ ನಿರ್ದೇಶಕರುಗಳು |
| 8 | ಸಮಾಜ ಕಲ್ಯಾಣ ಇಲಾಖೆ :-<br>ತಾಲ್ಲೂಕು ಸಮಾಜ ಕಲ್ಯಾಣ ಅಧಿಕಾರಿಗಳು |
| 9 | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:-<br>ವಿಸ್ತರಣಾಧಿಕಾರಿಗಳು |
| 10 | ಕೃಷಿ ಇಲಾಖೆ:-<br>1. ಸಹಾಯಕ ನಿರ್ದೇಶಕರುಗಳು<br>2. ಕೃಷಿ ಅಧಿಕಾರಿಗಳು |
| 11 | ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ<br>1. ಸಹಾಯಕ ನಿರ್ದೇಶಕರು<br>2. ಕೈಗಾರಿಕಾ ವಿಸ್ತರಣಾಧಿಕಾರಿಗಳು |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಯು.ಎನ್.ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಾರ್ಮಿಕ ಇಲಾಖೆ

ಇವರಿಗೆ:-

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು, ಇವರಿಗೆ ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ಹಾಗೂ ಅಧೀನ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರಿಗೆ 6000 ಪ್ರತಿಗಳನ್ನು ಹಾಗೂ ಕಾರ್ಮಿಕ ಆಯುಕ್ತರಿಗೆ 5000 ಪ್ರತಿಗಳನ್ನು ಕಳುಹಿಸಲು ಕೋರಲಾಗಿದೆ.

<u>ಪ್ರತಿಗಳು ಇವರಿಗೆ:-</u>

1.ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

4. ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
5.ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್ ಇವರ ಮುಖಾಂತರ ಎಲ್ಲಾ ಪಂಚಾಯತಿ ವಿಸ್ತರಣಾಧಿಕಾರಿಗಳಿಗೆ.
6.ಪ್ರಧಾನ ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
7.ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರ ಮುಖಾಂತರ ಎಲ್ಲ ಬಾಲ ವಿಕಾಸ ಯೋಜನಾಧಿಕಾರಿಗಳು ಸಮಗ್ರ ಬಾಲ ವಿಕಾಸ ಯೋಜನೆ.
8.ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9.ಸಹ ನಿರ್ದೇಶಕರು (ಡಿಡಿಪಿಐ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮುಖಾಂತರ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ : ದೈಹಿಕ ಶಿಕ್ಷಣಾಧಿಕಾರಿಗಳಿಗೆ.
10.ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.
11. ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ (ರೇಷ್ಮೆ ) ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
12.ನಿರ್ದೇಶಕರು, ಮುಖಾಂತರ ಎಲ್ಲಾ ರೇಷ್ಮೆ ವಿಸ್ತರಣಾಧಿಕಾರಿಗಳಿಗೆ: ಎಲ್ಲಾ ಹಿರಿಯ ರೇಷ್ಮೆ ನಿರೀಕ್ಷಕರುಗಳಿಗೆ: ಎಲ್ಲಾ ರೇಷ್ಮೆ ನಿರೀಕ್ಷಕರುಗಳಿಗೆ ಹಾಗೂ ಡೆಮಾನ್ಸ್ಟ್ರೇಟರ್‌ಗಳಿಗೆ.
13.ಮುಖ್ಯ ಪರಿವೀಕ್ಷಕರು, ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆ, ಬೆಂಗಳೂರು ಇವರ ಮುಖಾಂತರ ಕಾರ್ಖಾನೆಗಳ ಎಲ್ಲಾ ಹಿರಿಯ ಪರಿವೀಕ್ಷಕರುಗಳಿಗೆ ಹಾಗೂ ಎಲ್ಲಾ ಪರಿವೀಕ್ಷಕರುಗಳಿಗೆ
14.ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.
15.ನಗರ ಸಭೆ ಆಯುಕ್ತರು, ಬೆಂಗಳೂರು : ಮೈಸೂರು: ಹುಬ್ಬಳ್ಳಿ : ಧಾರವಾಢ : ಬೆಳಗಾಂ : ಗುಲ್ಬರ್ಗಾ : ಮಂಗಳೂರು.
16.ನಿರ್ದೇಶಕರು, ಪೌರಾಡಳಿ ಇಲಾಖೆ ಅವರ ಮುಖಾಂತರ ನಗರ ಸಭೆಯ ಎಲ್ಲಾ ಹೆಲ್ತ್ ಇನ್ಸ್‌ಪೆಕ್ಟರ್‌ಗಳಿಗೆ ಹಾಗೂ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ.
17.ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
18.ನಿರ್ದೇಶಕರ ಮುಖಾಂತರ ಎಲ್ಲಾ ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳಿಗೆ ಹಾಗೂ ಎಲ್ಲಾ ಸಮಾಜ ಕಲ್ಯಾಣ ನಿರೀಕ್ಷಕರುಗಳಿಗೆ.
19.ನಿರ್ದೇಶಕರು, ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತರು ಇವರ ಮುಖಾಂತರ ಎಲ್ಲಾ ತನಿಖಾ ಸಹಾಯಕರುಗಳಿಗೆ.
20.ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ವಿಕಾಸ ಸೌಧ, ಬೆಂಗಳೂರು.
21.ಆಯುಕ್ತರು, ಕೈಗಾರಿಕಾ ಅಭಿವೃದ್ಧಿ ಹಾಗೂ ನಿರ್ದೇಶಕರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಮುಖಾಂತರ ಎಲ್ಲಾ ವಿಸ್ತರಣಾಧಿಕಾರಿಗಳಿಗೆ ಹಾಗೂ ಎಲ್ಲಾ ಸಹಾಯಕ ನಿರ್ದೇಶಕರುಗಳಿಗೆ.
22.ಕಾರ್ಮಿಕ ಆಯುಕ್ತರು, ಕಾರ್ಮಿಕ ಇಲಾಖೆ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
23.ಉಪ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಇವರಿಗೆ.
24.ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
25.ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ ಇವರ ಪತ್ರಾಂಕಿತ ಅಪ್ತ ಸಹಾಯಕರು.
26.ಶಾಖಾ ರಕ್ಷಾ ಕಡತ : ಹೆಚ್ಚುವರಿ ಪ್ರತಿಗಳು.